ಕರ್ನಾಟಕ ಸರ್ಕಾರ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಾರ್ಯಾಲಯ ಕೊಪ್ಪಳ ವಿಭಾಗ, ಕೊಪ್ಪಳ.
ದೂರವಾಣಿ ಮತ್ತು ಪ್ಯಾಕ್ಸ್: 08539–220021 ಇ–ಮೇಲ್: kpal.dcf@gmail.com

ಸಂಖ್ಯೆ:ಲ್ಯಾಂಡ್‌ಎಫ್.ಸಿ/ಗುತ್ತಿಗೆ/ಸಿಆರ್/2018–19 ದಿ:12/03/2019

ಗೆ,

M/S AARESS IRON AND STEEL LIMITED
Baldota Enclave,
Abheraj Baldota Road,
**Hospet-583203.**

ಮಾನ್ಯರೇ,

ವಿಷಯ :– ಕೊಪ್ಪಳ ವಲಯದ ಕಾಸನಕಂಡಿ ಗ್ರಾಮದ ಸರ್ವೆ ನಂ:25 ರಲ್ಲಿಯ 1.84 ಹೆ. ಅರಣ್ಯ ಪ್ರದೇಶವನ್ನು ಗೇಣಿ ಮೇಲೆ ಗುತ್ತಿಗೆ ಪಡೆಯಲು ಅರ್ಜಿ ಸಲ್ಲಿಸಿರುವ ಬಗ್ಗೆ.

ಉಲ್ಲೇಖ :– 1) ನಿಮ್ಮ ಪ್ರಸ್ತಾವನೆಯ ದಿನಾಂಕ:18–02–2019.
2) ಸರ್ಕಾರಿ ಅದೇಶ ಸಂಖ್ಯೆ. ಅಪಜೀ–88–ಎಫೆಲ್‌ಎಲ್–2016 ಬೆಂಗಳೂರು ದಿ:31–08–2016.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಅರ್ಜಿಯ ಮೂಲಕ ನೀವು ಈ ವಿಭಾಗದ ವ್ಯಾಪ್ತಿಯಲ್ಲಿ ಬರುವ ಕೊಪ್ಪಳ ವಲಯದ ಚಿಕ್ಕಕಾಸನಕಂಡಿ ಗ್ರಾಮದ ಸರ್ವೆ ನಂ.25 ರಲ್ಲಿಯ 1.84ಹೆ ಅರಣ್ಯ ಪ್ರದೇಶದಲ್ಲಿ ಪೈಪ್ ಲೈನ್ ಹಾಗೂ ಟ್ರಾನ್ಸಮಿಶನ್ ಲೈನ್ ಅಳವಡಿಸಲು ಗುತ್ತಿಗೆ ನೀಡುವ ಬಗ್ಗೆ ಮಾನ್ಯ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು( ಅರಣ್ಯ ಸಂರಕ್ಷಣೆ) ಬೆಂಗಳೂರು ರವರಿಗೆ ಅನ್ ಲೈನ್ ಮೂಲಕ ಪ್ರಸ್ತಾವನೆಯನ್ನು ಸಲ್ಲಿಸಿ, ಅದರ ಪ್ರತಿಯನ್ನು ಈ ಕಛೇರಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದ ಮೇರೆಗೆ ಸದ್ರಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಉಪಯೋಗಿ ಸಂಸ್ಥೆಯಾದ ನೀವು ಅರಣ್ಯ ಭೂಮಿಗೆ ಪರ್ಯಾಯಾಗಿ ಪರಿಹಾರಾತ್ಮಕ ನೆಡುತೋಪುಗಳನ್ನು ಬೆಳೆಸುವ ಸಲುವಾಗಿ ದಾವಣಗೆರೆ ಜಿಲ್ಲೆಯ ಪರಪನಹಳ್ಳಿ ತಾಲ್ಲೂಕು ಅರಸೀಕೆರೆ ಹೋಬಳಿಯ ಚಟ್ಟಿಹಳ್ಳಿ ಗ್ರಾಮದ ಸರ್ವೆ ನಂ:131/ಬಿಪಿ1 ರಲ್ಲಿಯ 12.00 ಎಕರೆ ಸಿ **ಅಂಡ್ ಡಿ** ಭೂಮಿಯನ್ನು ಗುರುತಿಸಿರುತ್ತೀರಿ. **ಆದರೆ ಸರ್ಕಾರಿ ಅದೇಶ ಸಂಖ್ಯೆ: ಅಪಜೀ 88 ಎಫ್‌ಎಲ್‌ಎಲ್ 2016 ಬೆಂಗಳೂರು ದಿ:31/08/2016ರಲ್ಲಿ "ಇನ್ನು ಮುಂದೆ ತಕ್ಷಣ ದಿಂದ ಜಾರಿಗೆ ಬರುವಂತೆ ಲಭ್ಯವಿರುವ ಸರ್ಕಾರಿ ಸಿ ಮತ್ತು ಡಿ ಜಮೀನುಗಳನ್ನು ಸರಕಾರಿ ಉದ್ದೇಶಗಳಿಗೆ ಮಾತ್ರ ಅಂದರೆ ನೀರಾವರಿ, ಕುಡಿಯುವ ನೀರು, ವಿದ್ಯುದೀಕರಣ ರಸ್ತೆ, ಸಕಾರಿ ಕಟ್ಟಡಗಳು ಆಸ್ಪತ್ರೆಗಳು ಶಾಲೆ.ಕಛೇರಿ ಮುಂತಾದ ಯೋಜನೆಗಳಿಗೆ ಮಂಜೂರು ಮಾಡಲು ಹಾಗೂ ಸಾರ್ವಜನಿಕ ಉದ್ದೇಶಗಳಿಗೆ ಅರಣ್ಯ ಜಮೀನು ವಿಮೋಚನೆಯ ಸಂದರ್ಭದಲ್ಲಿ ಪರಿಹಾರಾತ್ಮಕ ಅರಣ್ಯೀಕರಣಕ್ಕೆ ನೀಡಲು ಕಾಯ್ದಿರಿಸಿಕೊಳ್ಳಲು ಅದೇಶಿಸಿದ್ದು. ಹಾಗೂ ಲಭ್ಯವಿರುವ ಸರ್ಕಾರಿ ಸಿ ಮತ್ತು ಡಿ ಮತ್ತಿತರ ಜಮೀನುಗಳನ್ನು ಖಾಸಗಿ ಸಂಸ್ಥೆಗಳು ಅಥವಾ ವ್ಯಕ್ತಗಳಿಗೆ ಪರಿಹಾರಾತ್ಮಕ ಅರಣ್ಯೀಕರಣಕ್ಕೆ ನೀಡುವುದನ್ನು ಅಥವಾ ಪ್ರಸ್ತಾಪಿಸಿವುದನ್ನು ತಕ್ಷಣದಿಂದ ನಿಲ್ಲಿಸುವಂತೆ ಸೂಚಿಸಿದ್ದು, ಖಾಸಗಿ ವ್ಯಕ್ತಿಗಳು ಪರಿಹಾರಾತ್ಮಕ ಅರಣ್ಯೀಕರಣಕ್ಕಾಗಿ ಅರಣ್ಯ ಪ್ರದೇಶದ ಮಧ್ಯದಲ್ಲಿರುವ ಇರತಕ್ಕಂತ ಅಥವಾ ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡಂತಹ ಮಾನವ ವನ್ಯಜೀವಿ ಸಂಘರ್ಷವಿರುವ**

ಖಾಸಗಿ ಜಮೀನಗಳನ್ನು ಮಾತ್ರ ಗುರುತಿಸಿ,ಖರೀದಿಸಿ ಸರ್ಕಾರಕ್ಕೆ ಪರಿಹಾರಾತ್ಕ ಅರಣ್ಯೀಕರಣಕ್ಕಾಗಿ ನೀಡುವಂತೆ ಆದೇಶಿಸಿರುತ್ತಾರೆ. ಆದುದರಿಂದ ಉಪಯೋಗಿ ಸಂಸ್ಥೆಯಾದ ನೀವು ಸರ್ಕಾರಿ ಆದೇಶದಲ್ಲಿ ಸೂಚಿಸಿರುವಂತೆ ಪರಿಹಾರಾತ್ಮಕ ಅರಣ್ಯೀಕರಣಕ್ಕೆ ಈಗಾಗಲೇ ಗುರುತಿಸಿರುವ ಸಿ ಮತ್ತು ಡಿ ಲ್ಯಾಂಡಿನ ಬದಲಾಗಿ ಅರಣ್ಯ ಪ್ರದೇಶದ ಮಧ್ಯದಲ್ಲಿರುವ, ಇರತಕ್ಕಂತ ಅಥವಾ ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡಂತಹ ಮಾನವ ವನ್ಯಜೀವಿ ಸಂಘರ್ಷವಿರುವ ಖಾಸಗಿ ಜಮೀನಗಳನ್ನು ಗುರುತಿಸಿ, ಖರೀದಿಸಿ ನೀಡುವಂತೆ ಸೂಚಿಸಿದೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಕೊಪ್ಪಳ ವಿಭಾಗ, ಕೊಪ್ಪಳ